# ಜಾಗತೀಕರಣದ ಪ್ರಭಾವದಲ್ಲಿ ಐತಿಹಾಸಿಕ ನಾಟಕಗಳ ಪ್ರಸ್ತುತತೆ: ಒಂದು ಅಧ್ಯಯನ

**ಅನಿತಾ ಪಾಟೀಲ್ ಟಿ.ಹೆಚ್.**

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಲಹಂಕ, ಬೆಂಗಳೂರು.

DOI: https://doi.org/10.5281/zenodo.18776224

## ABSTRACT:

ಜಾಗತೀಕರಣದ ಹಿನ್ನೆಲೆಯಲ್ಲಿ ಐತಿಹಾಸಿಕ ನಾಟಕಗಳ ಪ್ರಸ್ತುತತೆಯನ್ನು ಈ ಲೇಖನವು ವಿಶ್ಲೇಷಿಸುತ್ತದೆ. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಭಾರತೀಯರಲ್ಲಿ ರಾಷ್ಟ್ರೀಯ ಪ್ರಜ್ಞೆ ಮತ್ತು ಆತ್ಮವಿಶ್ವಾಸ ಮೂಡಿಸುವಲ್ಲಿ ಚಾರಿತ್ರಿಕ ನಾಟಕಗಳು ವಹಿಸಿದ ಪಾತ್ರವನ್ನು ಇಲ್ಲಿ ಚರ್ಚಿಸಲಾಗಿದೆ. 'ಸಂಸ'ರಿಂದ ಹಿಡಿದು ಕುವೆಂಪು, ಗಿರೀಶ್ ಕಾರ್ನಾಡ್ ಮತ್ತು ಆಧುನಿಕ ನಾಟಕಕಾರರವರೆಗೆ, ಇತಿಹಾಸದ ಸತ್ಯಾಂಶಗಳಿಗೆ ಚ್ಯುತಿ ಬಾರದಂತೆ ಹೇಗೆ ಮಾನವೀಯ ಮೌಲ್ಯಗಳು ಮತ್ತು ರಾಜಕೀಯ ಸಂಘರ್ಷಗಳನ್ನು ರಂಗರೂಪಕ್ಕೆ ತರಲಾಗಿದೆ ಎಂಬುದನ್ನು ವಿವರಿಸಲಾಗಿದೆ. ತುಘಲಕ್, ರಕ್ತಾಕ್ಷಿ, ಮತ್ತು ಕಿತ್ತೂರು ಚೆನ್ನಮ್ಮ ಮುಂತಾದ ನಾಟಕಗಳ ಮೂಲಕ ಇತಿಹಾಸದ ಪುನರ್ಮನನ ಮತ್ತು ಸಮಕಾಲೀನ ಸಮಾಜಕ್ಕೆ ಅವು ನೀಡುವ ಸಂದೇಶಗಳ ಮಹತ್ವವನ್ನು ಲೇಖನವು ಎತ್ತಿ ಹಿಡಿಯುತ್ತದೆ.

## KEYWORDS:

ಐತಿಹಾಸಿಕ ನಾಟಕಗಳು, ಜಾಗತೀಕರಣ, ರಾಷ್ಟ್ರೀಯ ಪ್ರಜ್ಞೆ, ನವೋದಯ ಸಾಹಿತ್ಯ, ರಂಗಭೂಮಿ ಪರಂಪರೆ.

ಸಾಹಿತ್ಯದ ಪ್ರಕಾರಗಳಲ್ಲಿ ನಾಟಕ ಸಾಹಿತ್ಯ ವಿಶಿಷ್ಟ ಪ್ರಕಾರಗಳಲ್ಲಿ ಒಂದು. ಐತಿಹಾಸಿಕ ನಾಟಕಗಳು ಗತಕಾಲದ ವೀರ ಪರಂಪರೆ, ಸಂಸ್ಕೃತಿ ಮತ್ತು ರಾಜಕೀಯ ಸನ್ನಿವೇಶಗಳನ್ನು ರಂಗಮಂಚದ ಮೇಲೆ ತರಲು ಪ್ರಮುಖ ಪಾತ್ರ ವಹಿಸುತ್ತವೆ. ಐತಿಹಾಸಿಕ ನಾಟಕಗಳ ಉಗಮವು ಭಾರತದಲ್ಲಿ ಬ್ರಿಟಿಷರ ಆಗಮನದಿಂದ ಪ್ರಾರಂಭವಾಗಿರಬಹುದು. ಭಾರತೀಯತೆಯ ಎಚ್ಚರ, ನವೋದಯ ಕಾಲದಲ್ಲಿ ಅನಿವಾರ್ಯ ಹಾಗೂ ಮೌಲ್ಯಯುತವಾಗಿ ಕಂಡವು. ಐತಿಹಾಸಿಕ ನಾಟಕಗಳು ಸ್ವಾತಂತ್ರ್ಯ ಹೋರಾಟದ ತುಮುಲಗಳು, ರಾಷ್ಟ್ರದ 'ಚಾರಿತ್ರಿಕ ಪರಂಪರೆ'ಯನ್ನು ಗುರುತಿಸುವುದರ ಮೂಲಕ ಜನರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವಂತಹ ಕೆಲಸವನ್ನು ಮಾಡಿದವು. ಪೌರಾಣಿಕ ಹಾಗೂ ಸಾಮಾಜಿಕ ನಾಟಕಗಳಿಗಿಂತ ಐತಿಹಾಸಿಕ ನಾಟಕಗಳ ಸಂಖ್ಯೆ ಕಡಿಮೆ. ಐತಿಹಾಸಿಕ ನಾಟಕಗಳು ಇತಿಹಾಸ, ವಸ್ತುನಿಷ್ಠತೆ, ವ್ಯಕ್ತಿನಿಷ್ಠತೆಯ ಸಾಹಿತ್ಯದ ಭಾವವನ್ನು ಹೇಳುತ್ತವೆ. ಐತಿಹಾಸಿಕ ನಾಟಕಗಳು ಮಾನವೀಯ ಮೌಲ್ಯಗಳು, ಅಂತಃಕರಣಗಳು, ವಸ್ತು ನಿರ್ವಹಣೆ ಹಾಗೂ ಇತಿಹಾಸದ ಅಂಶಗಳನ್ನು ಸರಳವಾಗಿ ನಿರೂಪಿಸುತ್ತವೆ. ನವೋದಯ ಕಾಲಘಟ್ಟದಲ್ಲಿ ಐತಿಹಾಸಿಕ ನಾಟಕಗಳ ರಚನೆ ಪ್ರಾರಂಭವಾಯಿತು.

'ಸಂಸ' ಕಾವ್ಯನಾಮದಿಂದ ಪ್ರಸಿದ್ಧರಾದ ಎನ್. ಸ್ವಾಮಿ ವೆಂಕಟಾದ್ರಿ ಅವರು ಮೊದಲ ಚಾರಿತ್ರಿಕ ನಾಟಕಗಳ ಕರ್ತೃ. ಇತರ ಐತಿಹಾಸಿಕ ನಾಟಕಗಳ ರಚನಾಕಾರರೆಂದರೆ ಎಂ.ಆರ್.ಶ್ರೀ, ಕುವೆಂಪು, ಮಾಸ್ತಿ, ವಿ.ಜಿ.ಕೆ., ಗಿರೀಶ್ ಕಾರ್ನಾಡ್, ಹೆಚ್. ಎಸ್. ಶಿವಪ್ರಕಾಶ್, ಡಾ. ಶಿವರಾಮ ಕಾರಂತ, ಮುಂತಾದವರು.

ನಾಟಕಗಳಲ್ಲಿ ಐತಿಹಾಸಿಕ ವಸ್ತುವಿನ ಬಳಕೆ, ಸಮಕಾಲೀನತೆಯಲ್ಲಿ ಪ್ರಸ್ತುತಗೊಳ್ಳುವ ವಿಶ್ಲೇಷಿಸುವ ಮನೋಭಾವವನ್ನು ಕಾಣಬಹುದು. ನಾಟಕಗಳಲ್ಲಿ ದೃಶ್ಯ ಮತ್ತು ಶ್ರಾವ್ಯ ಗುಣಗಳನ್ನು ಹೊಂದಿರುವುದರಿಂದ ಕಂಪೆನಿ ನಾಟಕಗಳು, ಹವ್ಯಾಸಿ ನಾಟಕ ತಂಡಗಳು ಒಂದು ಪರಂಪರೆಯನ್ನು ಸೃಷ್ಟಿಸಲು ಪ್ರಯತ್ನಿಸಿದವು. ಸ್ವಾತಂತ್ರ್ಯ ಕಾಲದಲ್ಲಿ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಮಾಡಿದವು. ಇತಿಹಾಸಕ್ಕೆ ಚ್ಯುತಿ ಬರದಂತೆ ಕಲ್ಪನೆಯ ಪ್ರತಿಭೆಗೆ ಹೊಸ ಹೊಳಹುಗಳನ್ನು ನೀಡಿದವು. ಕುವೆಂಪುರವರ 'ರಕ್ತಾಕ್ಷಿ' ಮತ್ತು 'ಬಿರುಗಾಳಿ' ನಾಟಕಗಳು ಶೇಕ್ಸ್‌ಪಿಯರ್‌ನ 'ದಿ ಟೆಂಪೆಸ್ಟ್' ಮತ್ತು 'ಹ್ಯಾಮ್ಲೆಟ್' ನಾಟಕಗಳ ರೂಪಾಂತರಗಳು. ಇವು ಕೆಳದಿ ಇತಿಹಾಸದ ವಸ್ತುವನ್ನೊಳಗೊಂಡಿವೆ.

ಗಿರೀಶ್ ಕಾರ್ನಾಡ್‌ರ 'ತುಘಲಕ್' ನಾಟಕ ಐತಿಹಾಸಿಕ ನವ್ಯ ನಾಟಕಗಳಲ್ಲಿ ಒಂದಾಗಿದ್ದು, 13 ದೃಶ್ಯಗಳನ್ನು ಒಳಗೊಂಡಿದೆ. ಈ ನಾಟಕದಲ್ಲಿ ಕಥಾನಾಯಕನಾದ ಮೊಹಮ್ಮದ್ ಬಿನ್ ತುಘಲಕ್‌ನ ಮನುಷ್ಯನ ಒಂಟಿತನ, ದುರ್ಬಲ ಮನಸ್ಥಿತಿ, ಆದರ್ಶಗಳಿರುವ ಕ್ರಿಯೆಯಲ್ಲಿ ತರಲಾರದ ಸೋಲು, ಅಸಹಾಯಕತೆ, ಹಿಂಸೆ, ಕ್ರೌರ್ಯ, ಬರ್ಬರ ಭಾವಗಳಿರುವ ಪಾತ್ರವನ್ನು ಚಿತ್ರಿಸಲಾಗಿದೆ. ಹೀಗೆ ಇನ್ನೂ ಅನೇಕ ಪಾತ್ರಗಳು ಐತಿಹಾಸಿಕ ನಾಟಕಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸುತ್ತವೆ. ಡಾ. ಎಂ. ಎಂ. ಕಲ್ಬುರ್ಗಿಯವರ 'ಖರೇ ಖರೇ ಕಿತ್ತೂರಿನ ಬಂಡಾಯ'ವಾಗಿರಬಹುದು, ರಾಜಾನಂದರ 'ಸಂಗೊಳ್ಳಿ ರಾಯಣ್ಣ', ವರದರಾಜ ಹುಯಿಲಗೋಳರ ನರಗುಂದದ ಬಾಬಾಸಾಹೇಬರ ಚರಿತ್ರೆಯ ವಸ್ತುವಿಷಯವಾಗಿರಬಹುದು, ತಮ್ಮದೇ ಆದ ಪ್ರಭಾವವನ್ನು ಜನಮಾನಸದಲ್ಲಿ ಮೂಡಿಸುತ್ತವೆ. ನಾಟಕಗಳಲ್ಲಿನ ಪಾತ್ರಧಾರಿಗಳ ಅಬ್ಬರದ ಭಾಷೆಯು ಜನರ ನಾಡಿಯನ್ನು ಹಿಡಿಯುತ್ತವೆ.

ವಿಜ್ಞಾನವನ್ನು ಪ್ರಯೋಗಾತ್ಮಕವಾಗಿ ಕಲಿಯಬಹುದು ಆದರೆ ಬಾಳನ್ನು ಪ್ರಯೋಗಾತ್ಮಕವಾಗಿ ಪರೀಕ್ಷಿಸಲು ನಾಟಕ ಒಂದೇ ಸಾಧನ. ಮಾನವೀಯ ಮತ್ತು ವೈಚಾರಿಕ ಮೌಲ್ಯಗಳನ್ನು ಚಾರಿತ್ರಿಕ ನಾಟಕಗಳಿಂದ ಇತಿಹಾಸದಲ್ಲಿ ಗುರುತಿಸಬಹುದು. ವಿರಳವಾಗಿ ಐತಿಹಾಸಿಕ ನಾಟಕಗಳು ಬರುತ್ತಿವೆಯಾದರೂ ಐತಿಹಾಸಿಕ ಸತ್ಯಾಂಶಗಳನ್ನು ಹೊಂದಿರಬೇಕು. ಇತಿಹಾಸದ ಸತ್ಯತೆಗೆ ಅಪಪ್ರಚಾರವಾಗಬಾರದು. ಐತಿಹಾಸಿಕ ನಾಟಕ ರಚನೆಯಲ್ಲಿ ಚರಿತ್ರೆಯ ಜ್ಞಾನ, ಶಿಸ್ತು ಅಗತ್ಯ.

ನಾಟಕ ಕನ್ನಡ ಸಾಹಿತ್ಯದ ವಿಶಿಷ್ಟ ಪ್ರಕಾರ. ಭಾರತದಲ್ಲಿ ಬ್ರಿಟಿಷರ ಆಗಮನದಿಂದ ಭಾರತೀಯರಲ್ಲಿ ಭಾರತೀಯತೆಯ ಎಚ್ಚರ, ನವೋದಯ ಕಾಲದಲ್ಲಿ ಅನಿವಾರ್ಯ ಹಾಗೂ ಮೌಲ್ಯವಾಗಿ ಕಂಡವು. ಸ್ವಾತಂತ್ರ್ಯ ಸಂಗ್ರಾಮದ ತುಮುಲಗಳು

ರಾಷ್ಟ್ರದ 'ಚಾರಿತ್ರಿಕ ಪರಂಪರೆ'ಯನ್ನು ಗುರುತಿಸಿಕೊಳ್ಳುವಂತಹ ಆತ್ಮವಿಶ್ವಾಸವನ್ನು ಪಡೆಯುವಂತಹ ಸಾಧನವಾಗಿ ಪರಿಣಮಿಸಿತು. ಐತಿಹಾಸಿಕ ನಾಟಕಗಳ ಪ್ರಮಾಣ ಸಾಮಾಜಿಕ ಹಾಗೂ ಪೌರಾಣಿಕ ನಾಟಕಗಳಿಗಿಂತ ಕಡಿಮೆ ಇದೆ. ಐತಿಹಾಸಿಕ ನಾಟಕಗಳು ನಾಡಿನಲ್ಲಿ ಆಗಿ ಹೋದ ರಾಜಕೀಯ ಇತಿಹಾಸದ ಘಟನೆಗಳನ್ನು, ವ್ಯಕ್ತಿಯ ಸಂಘರ್ಷವನ್ನು ನಿರೂಪಿಸುತ್ತವೆ. ಐತಿಹಾಸಿಕ ನಾಟಕಗಳು ಇತಿಹಾಸ ಮತ್ತು ಸಾಹಿತ್ಯ ನಡುವಿನ ಸಂಬಂಧವನ್ನು ಗುರುತಿಸುತ್ತವೆ. ಸಾಹಿತ್ಯ ಮತ್ತು ಇತಿಹಾಸ ವಿಭಿನ್ನ ನೆಲೆಗಳಾದರೂ ಕೊಡು-ಕೊಳ್ಳುವಿಕೆಗೆ ಅವಕಾಶ ಕಲ್ಪಿಸುತ್ತವೆ. ಇತಿಹಾಸ ವಸ್ತುನಿಷ್ಠತೆಗೆ ಒತ್ತು ಕೊಟ್ಟರೆ, ಸಾಹಿತ್ಯ ವ್ಯಕ್ತಿನಿಷ್ಠತೆಗೆ ಪುಷ್ಟಿಯನ್ನು ಕೊಡುತ್ತದೆ. ಇತಿಹಾಸ ಪ್ರತಿ ಚಲನೆಗೂ ಸಾಕ್ಷಿಯನ್ನು ಬಯಸುತ್ತದೆ. ಇದಕ್ಕೆ ಬದ್ಧ ಸಾಹಿತ್ಯ ವ್ಯಕ್ತಿಯ ಚಲನೆಯ ಹಿಂದಿನ ಮಾನವ ಮನಸ್ಸು ಒಂದು ಸನ್ನಿವೇಶಗಳಲ್ಲಿ ಏನೇನು ಸ್ಪಂದನೆಗಳನ್ನು ಅನುಭವಿಸಿತು ಎಂಬುದನ್ನು ದಾಖಲಿಸುತ್ತದೆ. ಇತಿಹಾಸದ ಘಟನೆಗಳಿಗೆ ಮಾನವೀಯ ಅಂತಃಕರಣ, ಸೃಷ್ಟಿ ಸಾಹಿತ್ಯದಿಂದ ಸಾಧ್ಯವಾಗುತ್ತದೆ. ಐತಿಹಾಸಿಕ ನಾಟಕಗಳಲ್ಲಿ ವಸ್ತುನಿರೂಪಣೆ ಇತಿಹಾಸದ ಅಂಶಗಳ ಸರಳ ನಿರೂಪಣೆಯಾಗಿದೆ. ನವೋದಯದ ಕಾಲಘಟ್ಟದಲ್ಲಿ ಐತಿಹಾಸಿಕ ನಾಟಕಗಳ ರಚನೆ ಆರಂಭವಾಯಿತು. ಎ. ಎನ್. ಸ್ವಾಮಿ ವೆಂಕಟಾದ್ರಿ ಐಯ್ಯರ್‌ರವರು 'ಸಂಸ' ಎಂಬ ಕಾವ್ಯನಾಮದಿಂದ ಮೊದಲ ಬಾರಿಗೆ ಚಾರಿತ್ರಿಕ ನಾಟಕಗಳನ್ನು ಬರೆದರು. ಎಂ.ಆರ್.ಶ್ರೀ, ಕುವೆಂಪು, ಮಾಸ್ತಿ, ವಿ.ಜಿ.ಕೆ., ಗಿರೀಶ್ ಕಾರ್ನಾಡ್, ಹೆಚ್. ಎಸ್. ಶಿವಪ್ರಕಾಶ್, ಡಾ. ಶಿವರಾಮ ಕಾರಂತ, ಮುಂತಾದವರು ತಮ್ಮ ನಾಟಕಗಳಲ್ಲಿ ಐತಿಹಾಸಿಕ ವಸ್ತುವಿನ ಬಳಕೆ ಮಾಡಿಕೊಂಡರು. ಸಮಕಾಲೀನತೆಯಲ್ಲಿ ಪ್ರಸ್ತುತಗೊಳ್ಳುವ, ವಿಶ್ಲೇಷಣೆಗೊಳ್ಳುವ ಮನೋಭಾವವನ್ನು ಕಾಣಬಹುದು.

ನಾಟಕ ದೃಶ್ಯ ಮತ್ತು ಶ್ರಾವ್ಯ ಗುಣಗಳನ್ನು ಹೊಂದಿರುವುದರಿಂದ ಒಂದು ಪರಂಪರೆಯನ್ನು ಸಮಾಜದಲ್ಲಿ ಸೃಷ್ಟಿಸಿದವು. ಕಂಪೆನಿ ನಾಟಕಗಳು ಹಾಗೂ ಹವ್ಯಾಸಿ ನಾಟಕಗಳ ಕೊಡುಗೆ ಮಹತ್ವವಾದುದು. ಸ್ವಾತಂತ್ರ್ಯ ಕಾಲದಲ್ಲಿ ಜನಸಾಮಾನ್ಯರಲ್ಲಿ ಜಾಗೃತಿ ಹಾಗೂ ದೇಶಪ್ರೇಮವನ್ನು ಮೂಡಿಸುವ ಕೆಲಸವನ್ನು ಮಾಡಿದೆ. ನರಗುಂದದ ಬಂಡಾಯ, ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಮುಂತಾದ ನಾಟಕಗಳು ಜನಪ್ರಿಯತೆಯನ್ನು ಪಡೆದಿದ್ದವು. ಐತಿಹಾಸಿಕ ನಾಟಕಗಳು ಇತಿಹಾಸಕ್ಕೆ ಚ್ಯುತಿ ಬರದಂತೆ ತನ್ನ ಕಾಲ್ಪನಿಕ ಪ್ರತಿಭೆಯಿಂದ ಹೊಸ ಹೊಳಹುಗಳನ್ನು ನೀಡಿದವು. ಸಂಸರ ಐತಿಹಾಸಿಕ ನಾಟಕಗಳು ಮೈಸೂರು ಒಡೆಯರ್‌ರವರಿಗೆ ಸಂಬಂಧಿಸಿದ್ದು, ಚಾರಿತ್ರಿಕ ಅಂಶಗಳನ್ನು ಒಳಗೊಂಡಿವೆ. ವಿಶಿಷ್ಟವಾದ ಭಾಷಾ ಪ್ರಯೋಗ ಮಾಡಲಾಗಿದೆ. ಅವರ 6 ನಾಟಕಗಳು ಮಾತ್ರ ಲಭ್ಯವಾಗಿವೆ. ಉಳಿದ 16 ಕಣ್ಮರೆಯಾಗಿವೆ.

ಕನ್ನಡದ ರಾಷ್ಟ್ರಕವಿ ಕುವೆಂಪುರವರ 'ರಕ್ತಾಕ್ಷಿ' ಮತ್ತು 'ಬಿರುಗಾಳಿ' ನಾಟಕವು ಶೇಕ್ಸ್‌ಪಿಯರ್‌ನ ನಾಟಕಗಳಾದ 'ಟೆಂಪೆಸ್ಟ್' ಮತ್ತು 'ಹ್ಯಾಮ್ಲೆಟ್' ನಾಟಕಗಳ ರೂಪಾಂತರಗಳು. ಇದು ಕೆಳದಿ ಇತಿಹಾಸದ ವಸ್ತು ವಿಷಯವನ್ನೊಳಗೊಂಡಿವೆ. ನಾಟಕಗಳ ಪ್ರಯೋಗದಲ್ಲಿ ಕಂದಗಲ್ ಹನುಮಂತರಾಯರು ಉತ್ತಮ ನಿರ್ದೇಶನದ

ಅನುಭವವನ್ನು ಪಡೆದಿದ್ದರು. ನಾಟಕಗಳಲ್ಲಿ ಚರಕಗಳ ಮೂಲಕ ಖಾದಿ ಪ್ರಚಾರ ಹಾಗೂ ಗಾಂಧಿ ತತ್ತ್ವಗಳ ಪ್ರಸಾರದ ಸೂಚನೆಗಳನ್ನು ಕಾಣಬಹುದು.

ಐತಿಹಾಸಿಕ ನಾಟಕಗಳಲ್ಲಿ 'ನರಗುಂದದ ಬಂಡಾಯ' ಎಂಬ ನಾಟಕದಲ್ಲಿ ನರಗುಂದದ ಮುತ್ತಿಗೆ, ಭಾರತದ ನಿಜವಾದ ಸಾಮ್ರಾಜ್ಯಾಧಿಪತಿಗಳು ಬ್ರಿಟಿಷರಲ್ಲ ಭಾರತೀಯರು ಎಂಬ ಸಂದೇಶವನ್ನು ತಲುಪಿಸುವ ಕೆಲಸವನ್ನು ಮಾಡುತ್ತಿತ್ತು. ಸಮಕಾಲೀನ ವಿಚಾರಗಳಿಗೆ ನಾಟಕಗಳು ಸ್ಪಂದಿಸುತ್ತಿದ್ದವು. ಜನರಲ್ಲಿ ಅರಿವನ್ನು ಮೂಡಿಸುತ್ತಿದ್ದವು.

ಐತಿಹಾಸಿಕ ವ್ಯಕ್ತಿಗಳ ಪಾತ್ರಗಳನ್ನು ರೂಪಿಸುವಾಗ ಗರುಡ ಸದಾಶಿವರಾಯರು ಶರಣಬಸವ, ಕಬೀರ್‌ದಾಸ್‌ರಂತಹ ಪಾತ್ರಗಳ ಬಗ್ಗೆ ವಿಶೇಷ ಆಸಕ್ತಿ ವಹಿಸಿದ್ದರು. 'ಜಗಜ್ಯೋತಿ ಬಸವೇಶ್ವರ'ದಂತಹ ನಾಟಕಗಳಿಗೆ ಏಳಗಿ ಬಾಳಪ್ಪ ನಾಟಕ ಮಂಡಳಿ ಜನಮಾನಸದಲ್ಲಿ ಅಚ್ಚೊತ್ತಿತ್ತು. ಗೌತಮ ಬುದ್ಧ, ಅಕ್ಕಮಹಾದೇವಿ, ಹೇಮರೆಡ್ಡಿ ಮಲ್ಲಮ್ಮದಂತಹ ಭಕ್ತಿಪ್ರಧಾನ ನಾಟಕಗಳಾಗಿದ್ದರೂ ಐತಿಹಾಸಿಕ ಚೌಕಟ್ಟಿನೊಳಗೆ ನಿಯೋಜನೆಗೊಂಡಿದ್ದವು. 1905ರ ನಂತರ ವಿಜಯನಗರ ಸಾಮ್ರಾಜ್ಯ ಕುರಿತ ನಾಟಕಗಳು ರಚನೆಯಾದವು. ಕರ್ನಾಟಕದ ಸಾಮ್ರಾಜ್ಯ, ಸ್ವಾಮಿನಿಷ್ಠೆ ತೋರಿದ 'ತೇಜಸ್ವಿನಿ' ನಾಟಕ ರಚನೆಯಾಯಿತು. 1920ರಲ್ಲಿ ಗುಬ್ಬಿ ಕಂಪೆನಿ ಯಶಸ್ವಿ ಪ್ರಯೋಗ ನಡೆಸಿತು. ವಿಜಯನಗರದ ರಣಕಲಿ ಎಚ್ಚಮ ನಾಯಕನ ಬಗ್ಗೆ ನಾಟಕದ ಪ್ರಯೋಗ ನಡೆಯಿತು. ಮಾಸ್ತಿಯವರ 'ಛತ್ರಪತಿ ಶಿವಾಜಿ', 'ಕಾಕನ ಕೋಟೆ' (ಚಲನಚಿತ್ರವಾಯಿತು), 'ತಾಳಿಕೋಟೆ', ದೇವುಡುರವರ 'ಮಯೂರ' (ನಂತರ ಚಲನಚಿತ್ರವಾಯಿತು), ಡಿ.ವಿ. ಜಿ.ಯವರ 'ವಿದ್ಯಾರಣ್ಯ ವಿಜಯ', ರಾಮರಾಯರ 'ಹೊಯ್ಸಳ ಚರಿತ್ರೆ', ಶ್ರೀರಂಗರ 'ಪುಲಿಕೇಶಿ' ಜನರಲ್ಲಿ ಚಾರಿತ್ರಿಕ ಒಳಸಂಗತಿಗಳ ಬಗ್ಗೆ ಅರಿವು ಮೂಡಿಸಿದವು. 12ನೇ ಶತಮಾನದ ಕಲ್ಯಾಣ ಕ್ರಾಂತಿಯ ಶರಣರ ಅನುಭಾವಿಕ ಚಿಂತನೆಯ ಬಗ್ಗೆ ನಾಟಕಕಾರರಾದ ಹೆಚ್. ತಿಪ್ಪೇರುದ್ರಸ್ವಾಮಿ, ಲಂಕೇಶ್, ಗಿರೀಶ್ ಕಾರ್ನಾಡ್, ಶಿವಪ್ರಕಾಶ್‌ರಂತಹವರು ವಚನಕಾರರ ಬದುಕಿನ ಕ್ರಾಂತಿಯ ಸಫಲತೆ ಮತ್ತು ವಿಫಲತೆಯನ್ನು ತಮ್ಮ ನಾಟಕಗಳಲ್ಲಿ ಕಟ್ಟಿ ನೋಡುತ್ತಾರೆ.

ಅ.ನ.ಕೃ. 'ರಜಪೂತ ಲಕ್ಷ್ಮೀ' ಎಂಬ ನಾಟಕದ ಕಥಾವಸ್ತುವನ್ನು ಕರ್ನಲ್ ಟಾಡ್‌ರವರ 'ಆನಲ್ಸ್ ಆಫ್ ರಾಜಸ್ತಾನ್' ಎಂಬ ಕೃತಿಯ ಮೂಲದಿಂದ ಆರಿಸಿದ್ದಾರೆ. ಇದರಲ್ಲಿ ಭಾರತದ ಜನಾಂಗ-ಜನಾಂಗಗಳ ಘರ್ಷಣೆ, ಸಮ್ಮಿಳನ, ಆರ್ಯ-ದ್ರಾವಿಡ, ಹಿಂದೂ-ಮುಸ್ಲಿಮ್, ಭಾರತೀಯ ಸಂಸ್ಕೃತಿಗಳ ಘರ್ಷಣೆಯ ಬಗ್ಗೆ ಉಲ್ಲೇಖವಿದೆ. ಹಿಂದೂ-ಮುಸ್ಲಿಮರ ಐಕ್ಯತೆ, ದಾರ್ಶನಿಕತೆ, ಸೂಫಿ ಪಂಥದ ವಿಚಾರಗಳನ್ನು ತಿಳಿಸುತ್ತದೆ. ಹೆಚ್.ಕೆ. ರಂಗನಾಥರ 'ದುರಂತ ಮತ್ತು ಇತರ ನಾಟಕಗಳು' ಸಾಮ್ರಾಟ್ ಶಹಜಹಾನನ ಕಡೆಯ ದಿನಗಳ ದುರಂತ ಹಾಗೂ ಅನುಭವಗಳನ್ನು ಇತಿಹಾಸದ ನಾಟಕಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಔರಂಗಜೇಬ್ ತನ್ನ ತಂದೆಯನ್ನು ಕೊಂದು ಸಿಂಹಾಸನವನ್ನು ಪಡೆದ ಚಾರಿತ್ರಿಕ ಅಂಶಗಳನ್ನು ಚಿತ್ರಿಸಲಾಗಿದೆ. ಗಿರೀಶ್ ಕಾರ್ನಾಡ್‌ರ

'ತುಘಲಕ್' ನಾಟಕವು ನವ್ಯ ನಾಟಕ ಪ್ರಕಾರವಾಗಿದ್ದು, 13 ದೃಶ್ಯಗಳನ್ನು ಒಳಗೊಂಡಿದೆ. ಮೊಹಮ್ಮದ್-ಬಿನ್-ತುಘಲಕ್‌ನ ಜೀವನದ ದುರಂತ ನಾಟಕದಲ್ಲಿ ಮನುಷ್ಯನ ಒಂಟಿತನ, ದುರ್ಬಲ ಮನಸ್ಥಿತಿ, ಆದರ್ಶಗಳನ್ನು ಕ್ರಿಯಾರೂಪದಲ್ಲಿ ತರಲಾಗದ ಸೋಲು, ಅಸಹಾಯಕತೆ, ಪರಿಣಾಮ, ಜರ್ಝರ, ಹಿಂಸೆ, ಕ್ರೌರ್ಯ, ವಿಜೃಂಭಣೆಯನ್ನು ತುಘಲಕ್ ಪಾತ್ರದಲ್ಲಿ ಚಿತ್ರಿಸಿದ್ದಾರೆ.

ಅ.ನ.ಕೃ. ಅವರ 'ರಾಷ್ಟ್ರ ಧುರೀಣ ಬೆಂಗಳೂರು ಕೆಂಪೇಗೌಡ' ನಾಟಕವು 9 ದೃಶ್ಯಗಳನ್ನೊಳಗೊಂಡಿದೆ. ಹ.ಕ. ರಾಜೇಗೌಡರ 'ಯಲಹಂಕ ಪ್ರಭು' ಚಾರಿತ್ರಿಕ ನಾಟಕವು ಹೊಸ ರೀತಿಯ ನಿರೂಪಣೆಯನ್ನು ಹೊಂದಿದೆ. ಹನುಮಂತೇಗೌಡ ಮತ್ತು ರಾಮೇಗೌಡರ ಚಾರಿತ್ರಿಕ ನಾಟಕ ಹಲಗಲಿ ಬಂಡಾಯದ ವಿಷಯವನ್ನೊಳಗೊಂಡಿದೆ. ಲಾವಣಿಯ ಪ್ರಸ್ತಾವನೆಯು ಹಾಡಿನಲ್ಲಿ ಐತಿಹಾಸಿಕ ಅಂಶಗಳನ್ನು ಒಳಗೊಂಡಿದೆ. ಹಲಗಲಿ ಬೇಡರ ಬಂಡಾಯ, ನಿಶಸ್ತ್ರೀಕರಣ, ಹುಲಿಗೆಜ್ಜನ ಪಾತ್ರ 12 ದೃಶ್ಯಗಳನ್ನೊಳಗೊಂಡಿದೆ.

**ಉಪಸಂಹಾರ:**

ನಾಟಕಗಳಲ್ಲಿ ಅಬ್ಬರದ ಭಾಷೆ ಇದ್ದರೂ ಪಾತ್ರಧಾರಿಗಳು ಮನೋಜ್ಞವಾಗಿ ಅಭಿನಯಿಸಿ ಜನರ ನಾಡೀಬಡಿತವನ್ನು ಹಿಡಿಯುವುದರ ಮೂಲಕ ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡುತ್ತಾರೆ. "ನಾಟಕಗಳು ಇಂದಿನ ಜೀವಿತದ ಕನ್ನಡಿಯಾಗಬೇಕು, ಮುಂದಿನದಕ್ಕೆ ಕೈದೀವಟಿಗೆಯಾಗಬೇಕು, ಪ್ರೇಕ್ಷಕರಿಗೂ ಹೊಸ ದೃಶ್ಯ ಮತ್ತು ಧ್ಯೇಯಗಳನ್ನು ಕೊಡುವುದು ನಾಟಕದ ಮುಖ್ಯ ಧರ್ಮ" ಎಂದು ಶ್ರೀರಂಗರವರು ನಾಟಕವನ್ನು ವ್ಯಾಖ್ಯಾನಿಸಿದ್ದಾರೆ.

ವಿಜ್ಞಾನವನ್ನು ಪ್ರಯೋಗಾತ್ಮಕವಾಗಿ ಕಲಿಯಬಹುದು. ಆದರೆ ಬಾಳನ್ನು ಪ್ರಯೋಗಾತ್ಮಕವಾಗಿ ಪರೀಕ್ಷಿಸಲು ನಾಟಕವೊಂದೇ ಸಾಧನ ಎಂದಿದ್ದಾರೆ. ಮಾನವೀಯ ಮತ್ತು ವೈಚಾರಿಕ ಮೌಲ್ಯಗಳನ್ನು ಚಾರಿತ್ರಿಕ ನಾಟಕಗಳಲ್ಲಿ ಗುರುತಿಸಬಹುದು. ಪ್ರಸ್ತುತ ಸಂದರ್ಭದಲ್ಲಿ ವಿರಳವಾಗಿ ನಾಟಕಗಳು ಹೊರ ಬರುತ್ತಿದ್ದರೂ ಐತಿಹಾಸಿಕ ನಾಟಕಗಳ ಸತ್ಯತೆಯನ್ನೊಳಗೊಂಡಿರಬೇಕು. ಅಪಪ್ರಚಾರವಾಗಬಾರದು. ಇತಿಹಾಸದ ಜ್ಞಾನ ಮತ್ತು ಶಿಸ್ತುಬದ್ಧತೆ ಅಗತ್ಯವಾದುದು.

ಜಾಗತೀಕರಣದ ಯುಗದಲ್ಲಿ ಸ್ಥಳೀಯ ಇತಿಹಾಸವೆಲ್ಲವೂ ಕಳಚಿಕೊಳ್ಳುತ್ತಿರುವಾಗ ಜಾಗತಿಕ ಪ್ರಜ್ಞೆ ಮುಖ್ಯವಾಗುತ್ತಿರುವಾಗ ಐತಿಹಾಸಿಕ ನಾಟಕಗಳು ತಮ್ಮ ಪರಂಪರೆಯನ್ನು ಸಾಕಾರಗೊಳಿಸಿಕೊಳ್ಳಲು ನೆರವಾಗುತ್ತವೆ. ಸಮಕಾಲೀನ ಬದುಕಿಗೆ ಸ್ಪಂದಿಸುತ್ತವೆ. ಮನುಷ್ಯನ ಬದುಕಿನ ವಿಕಾಸವನ್ನು ಗುರುತಿಸಲು ಐತಿಹಾಸಿಕ ಪ್ರಜ್ಞೆ ಅನನ್ಯವಾಗಿದೆ. ಸಾರ್ವತ್ರಿಕ ಮೌಲ್ಯಗಳನ್ನು ಪ್ರತಿಪಾದಿಸುವ ಚಾರಿತ್ರಿಕ ನಾಟಕಗಳು ತಮ್ಮ ಕೊಡುಗೆ ನೀಡಬಲ್ಲವು.

## ಪರಾಮರ್ಶನ ಗ್ರಂಥಗಳು:

1. ಕಲಬುರ್ಗಿ ಎಂ.ಎಂ., (2016), ಖರೇ ಖರೇ ಕಿತ್ತೂರು ಬಂಡಾಯ (ನಾಟಕ), ಧಾರವಾಡ: ಕಲ್ಲಾಪೂರ ಪ್ರಕಾಶನ.
2. ಉಷಾದೇವಿ ಸಿ.ಜಿ., (2008), ಕನ್ನಡದಲ್ಲಿ ಐತಿಹಾಸಿಕ ನಾಟಕಗಳು, ಮೈಸೂರು: ಉಷಾ ಸಾಹಿತ್ಯ ಮಾಲೆ.
3. ರಾಜಾನಂದ, (2002), ಸಂಗೊಳ್ಳಿ ರಾಯಣ್ಣ (ನಾಟಕ), ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.